ಕಾರಣಕ್ಕಾಗಿ, ನಿಮ್ಮ ಮನಮೋಹನಸಿಂಗ್‌ರವರ ಉದಾರ ಆರ್ಥಿಕ ನೀತಿಯನ್ನು ತಂದಿದ್ದಾರೆ ಆ ಒಂದು ಭ್ರಮೆಯಿಂದ ಜನಸಾಮಾನ್ಯರು ಮುಖ್ಯವಾಗಿ ರೈತರ ಮತ್ತು ಕಾರ್ಮಿಕರ ಹಿತವನ್ನು ಕಾಪಾಡದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಕೇವಲ ಡಂಕಲ್ ಪ್ರಸ್ತಾಪಗಳನ್ನು ಪ್ರಸ್ತಾಪ ಮಾಡುವುದರಿಂದ ದೇಶದ ಹಿತವನ್ನು ಕಾಪಾಡುವುದಕ್ಕೆ ಸಾಧ್ಯವಿಲ್ಲ. ನಿಮಗೆ ಗೊತ್ತಿದೆ ಈಗಾಗಲೇ ಒಂದು ಶಕ್ತಿ ಹುಟ್ಟಿಕೊಂಡಿದೆ, ದೇಶದ ಎಲ್ಲಾ ಪಕ್ಷಗಳು ಡಂಕಲ್ ಪ್ರಸ್ತಾವನೆಗಳನ್ನು ಪಕ್ಷಗಳ ಧುರೀಣರು ವಿರೋಧ ಮಾಡುತ್ತಾರೆ. ಆದರೆ ಇವತ್ತು ಡಂಕಲ್‌ರವರ ಏಜೆಂಟರಾಗಿ ಮಹಾರಾಷ್ಟ್ರದಲ್ಲಿ ಕೆಲಸ ಮಾಡುವಂತಹ ಜನ ಇದ್ದಾರೆ. ಅವರ ಪರವಾಗಿ ರ‍್ಯಾಲಿ ಮಾಡುವ ಜನರು ಇದ್ದಾರೆ. ಇದರ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಎಲ್ಲಾ ಪಕ್ಷಗಳಲ್ಲಿರುವಂತಹ ಬಂಡವಾಳಶಾಹಿ ಹಿತಾಸಕ್ತಿಗಳನ್ನು ಕಾಪಾಡುವಂತಹ ಜನ ಏನಿದ್ದಾರೆ ಅವರು ಇದರ ಹಿಂದೆ ಇದ್ದಾರೆನ್ನುವ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ನಿಜವಾಗಲೂ ಕಾಂಗ್ರೆಸ್ ಪಕ್ಷದ ಪ್ರಗತಿಪರ ವ್ಯಕ್ತಿಗಳು ಏನಿದ್ದಾರೆ ಅವರೂ ಸಹ ಇದನ್ನು ಮನಗಾಣಬೇಕು. ಇವತ್ತು ಲೋಕಸಭೆಯಲ್ಲಿ ಪಕ್ಷಾತೀತವಾಗಿ 250 ಜನ ಸದಸ್ಯರು ಡಂಕೆಲ್ ಪ್ರಸ್ತಾಪವನ್ನು ವಿರೋಧ ಮಾಡಿದ್ದಾರೆ ಅಥವಾ ಬೀಜ ಉದಾರೀಕರಣ ನೀತಿಯನ್ನು ವಿರೋಧ ಮಾಡಿದ್ದಾರೆ ಅಥವಾ ಉದಾರವಾದ ಆರ್ಥಿಕ ನೀತಿಯನ್ನು ವಿರೋಧ ಮಾಡಿದ್ದಾರೆ, ಅದನ್ನು ನಾವು ಸಹ ಇಲ್ಲಿ ಚರ್ಚೆ ಮಾಡಬೇಕು, ಅಂತಹದ್ದೆ ಒಂದು ಕೆಲಸವನ್ನು ಮಾಡಲಿಕ್ಕೆ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ 1993–94ನೇ ಸಾಲಿನ ಈವೊಂದು ಆಯವ್ಯಯ ಪತ್ರ ಅತ್ಯಂತ ನಿರಾಶಾದಾಯಕವಾದ ಆಯವ್ಯಯ ಪತ್ರವಾಗಿದೆ. ಈ ಆಯವ್ಯಯ ಪತ್ರದಲ್ಲಿ ಈ ದೇಶದ ಜನಸಾಮಾನ್ಯರ ಹಿತವನ್ನು ಕಾಪಾಡುವುದಕ್ಕೆ ಜನಸಾಮಾನ್ಯರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಜನಸಾಮಾನ್ಯರ ತಲಾವಾರು ಆದಾಯವನ್ನು ಹೆಚ್ಚು ಮಾಡಲಿಕ್ಕೆ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಗಣನೀಯವಾಗಿ ಹೆಚ್ಚು ಮಾಡಲಿಕ್ಕೆ ಕೈಗಾರಿಕಾ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಯಾವುದೇ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇದು ಕೇವಲ ವಿರೋಧಾಭಾಸ. ಯಾವುದೇ ಒಂದು ಗೊತ್ತು ಗುರಿಯಿಲ್ಲದಂತಹ ಆರ್ಥಿಕ ನೀತಿಯನ್ನು ಅನುಸರಿಸುವಂತಹ ಆಯವ್ಯಯ ಪತ್ರವಾಗಿದೆ ಎನ್ನುವ ಮಾತನ್ನು ಹೇಳಿ, ಇದನ್ನು ವಿರೋಧ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ತಮಗೆ ವಂದನೆಗಳು.

(ಶ್ರೀಮತಿ ದಮಯಂತಿ ಬೋರೇಗೌಡರವರು ಅಧ್ಯಕ್ಷ ಪೀಠದಲ್ಲಿದ್ದರು)

† ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):– ಮಾನ್ಯ ಅಧ್ಯಕ್ಷಿಣಿಯವರೆ, 1993–94ನೇ ಸಾಲಿನ ಅರ್ಥಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರ ಗ್ರಾಮೀಣಾಭಿವೃದ್ಧಿಯ ಬಗ್ಗೆಯಾಗಲೀ ರೈತರ ಹಿತಚಿಂತನೆಯ ಬಗ್ಗೆಯಾಗಲೀ ಅಥವಾ ಗ್ರಾಮೀಣ ಆರ್ಥಿಕ ಸಂಸ್ಥೆಗಳಾದ ಸಹಕಾರ ಸಂಸ್ಥೆಗಳ ಅಭಿವೃದ್ಧಿ ಬಗ್ಗೆಯಾಗಲೀ ಯಾವುದೇ ಆಶಾದಾಯಕವಾದ ಸೂಚನೆಯನ್ನು ಈ ಆಯವ್ಯಯ ಪತ್ರದಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಇದನ್ನು ವಿರೋಧ ಮಾಡುವುದು ಅನಿವಾರ್ಯವಾಗಿದೆ. ಆದರಲ್ಲೂ ಸಹಿತ ಭಾರತ ದೇಶದಲ್ಲಿರತಕ್ಕ ನೂರಕ್ಕೆ 70ರಷ್ಟು ರೈತರಿಗೆ ನೀರಾವರಿಯ ಬಗ್ಗೆ ಸಾಕಷ್ಟು ಹಣವನ್ನು ಕೊಡುತ್ತೇವೆಂದು ಅವರು ಹೇಳಿದ್ದಾರೆ.

ಆದರೆ ಮಾನ್ಯ ಅಧ್ಯಕ್ಷರೇ, ಕೃಷ್ಣಾ, ಕಾವೇರಿ, ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತೇವೆ ಎಂದು ಹೇಳಿದರೂ ಸಹಿತ ರಾಜ್ಯದಲ್ಲಿ ಈಗಾಗಲೇ ಇರತಕ್ಕಂಥ ನೀರಾವರಿ ಕೆರೆಗಳು ಹಾಗೂ ನೀರಾವರಿ ಯೋಜನೆಗಳು ಏನು ಇವೆ ಅವುಗಳ ನಿರ್ವಹಣಾ ವೆಚ್ಚವನ್ನು ಕೂಡ ಕೊಡಲಿಕ್ಕೆ ಇವರು ಏನೂ ಅನುಕೂಲ ಮಾಡಿಕೊಟ್ಟಿಲ್ಲ. ಮೊನ್ನೆ ತಾನೆ ಆದ ಮಹಾಪೂರದಿಂದ